# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 502 (630) |
| ಸದಸ್ಯರ ಹೆಸರು | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | 20.08.2026 |
| ಉತ್ತರಿಸುವ ಸಚಿವರು | ಮಾನ್ಯ ಮುಖ್ಯಮಂತ್ರಿಗಳು |

<table>
<tr><th>ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಪ್ರಸ್ತುತ ಗುತ್ತಿಗೆ (Contract) ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಒಟ್ಟು 'ಡಿ' ದರ್ಜೆ ನೌಕರರು ಹಾಗೂ ಡೇಟಾ ಎಂಟ್ರಿ ಆಪರೇಟರ್‌ಗಳ (Data Entry Operators) ಸಂಖ್ಯೆ ಎಷ್ಟು? (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)</td><td>ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಆಡಳಿತ ವಿಭಾಗಗಳು, ಜಾರಿ ವಿಭಾಗಗಳು, ಜಾಗೃತಿ ಹಾಗೂ ಮೇಲ್ಮನವಿ ವಿಭಾಗಗಳಾಗಿ ವಿಂಗಡಣೆಯಾಗುವುದರಿಂದ, ಜಿಲ್ಲಾವಾರು ಮಾಹಿತಿಯು ಲಭ್ಯವಾಗುವುದಿಲ್ಲ. ಅದರಂತೆ, ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 863 'ಡಿ' ದರ್ಜೆ ನೌಕರರ ಹಾಗೂ 1615 ಡೇಟಾ ಎಂಟ್ರಿ ಆಪರೇಟರ್‌ಗಳ ವಿವರಗಳನ್ನು ವಿಭಾಗವಾರು ನೀಡಲಾಗಿದೆ. ಕ್ರಮವಾಗಿ ಅನುಬಂಧ-1 ಮತ್ತು ಅನುಬಂಧ-2ರಲ್ಲಿ ನೀಡಲಾಗಿದೆ.</td></tr>
<tr><td>ಆ</td><td>ಸದರಿ ಗುತ್ತಿಗೆ ನೌಕರರಿಗೆ ಪ್ರಸ್ತುತ ಇಲಾಖೆಯಿಂದ ಪ್ರತಿ ತಿಂಗಳು ನೀಡಲಾಗುತ್ತಿರುವ ವೇತನ /ಗೌರವಧನ ಎಷ್ಟು? ಗುತ್ತಿಗೆ ಏಜೆನ್ಸಿಗಳ ಮೂಲಕ ಇವರಿಗೆ ಪಾವತಿಯಾಗುತ್ತಿರುವ ನಿವ್ವಳ ಸಂಬಳ ಎಷ್ಟು? (ಸಂಪೂರ್ಣ ವಿವರ ನೀಡುವುದು)</td><td>ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ದತ್ತಾಂಶ ನಮೂದಕರುಗಳಿಗೆ ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ಕಾಯ್ದೆಯಂತೆ ಈ ಕೆಳಕಂಡಂತೆ ವೇತನವನ್ನು ನಿಗಧಿಪಡಿಸಿ ಹೊರಗುತ್ತಿಗೆ ಏಜೆನ್ಸಿಯ ಮೂಲಕ ಪಾವತಿ ಮಾಡಲಾಗುತ್ತಿದೆ. ವಿವರಗಳು ಈ ಕೆಳಕಂಡಂತಿವೆ.
<table>
<tr><th></th><th>ದತ್ತಾಂಶ ನಮೂದಕರು</th><th>ಅಟೆಂಡರ್‌ಗಳು</th></tr>
<tr><td>ಮೂಲವೇತನ</td><td>ರೂ.16,564.02</td><td>ರೂ 13,974.62</td></tr>
<tr><td>ವ್ಯತ್ಯಾಸವಾಗುವ ತುಟ್ಟಿ ಭತ್ಯೆ</td><td>ರೂ. 3,254.40</td><td>ರೂ 3,254.40</td></tr>
<tr><td>ಒಟ್ಟು ವೇತನ</td><td>ರೂ. 19,818.42</td><td>ರೂ.17,229.02</td></tr>
</table>
ಹೊರಗುತ್ತಿಗೆ ಆಧಾರದ ದತ್ತಾಂಶ ನಮೂದಕರುಗಳಿಗೆ ಒಟ್ಟು ವೇತನ ರೂ.19,818.42/- ಗಳಾಗಿದ್ದು, ಸದರಿ ಮೊತ್ತದಲ್ಲಿ ನಿಯಮಾನುಸಾರ EPF: 12% ರೂ. 1,800/- ಹಾಗೂ ESI : 0.75 %. ರೂ. 149 ಗಳನ್ನು ಕಡಿತಗೊಳಿಸಿ ಸಂಬಂಧಪಟ್ಟ ಇಲಾಖೆ/ಪ್ರಾಧಿಕಾರಗಳಿಗೆ ಪಾವತಿಸಿ, ರೂ.17,869.42/-ಗಳ ವೇತನವನ್ನು ನೇರವಾಗಿ ಬ್ಯಾಂಕ್ ಖಾತೆಗಳಿಗೆ ಹೊರಗುತ್ತಿಗೆ ಏಜೆನ್ಸಿಯ ಮೂಲಕ ಪಾವತಿ ಮಾಡಲಾಗುತ್ತಿದೆ.<br><br>ಮುಂದುವರೆದು, ಹೊರಗುತ್ತಿಗೆ ಆಧಾರದ ಅಟೆಂಡರ್‌ಗಳಿಗೆ ಒಟ್ಟು ವೇತನ ರೂ.17,229.02/-ಗಳಾಗಿದ್ದು, ಸದರಿ ಮೊತ್ತದಲ್ಲಿ ನಿಯಮಾನುಸಾರ EPF : 13% ರೂ. 2,239.77/- ಹಾಗೂ ESI 3.25%. ರೂ. 559.94 ಗಳನ್ನು ಕಡಿತಗೊಳಿಸಿ ಸಂಬಂಧಪಟ್ಟ ಇಲಾಖೆ/ಪ್ರಾಧಿಕಾರಗಳಿಗೆ ಪಾವತಿಸಿ, ರೂ.14,429.31/-ಗಳ ವೇತನವನ್ನು ನೇರವಾಗಿ ಬ್ಯಾಂಕ್ ಖಾತೆಗಳಿಗೆ ಹೊರಗುತ್ತಿಗೆ ಏಜೆನ್ಸಿಯ ಮೂಲಕ ಪಾವತಿ ಮಾಡಲಾಗುತ್ತಿದೆ.</td></tr>
</table>

| | | |
|---|---|---|
| | ಸರ್ಕಾರವು ದಿನಾಂಕ:22.05.2026ರ ಅಧಿಸೂಚನೆಯಂತೆ ಈ ಗುತ್ತಿಗೆ ನೌಕರರ ವೇತನವನ್ನು ಹೆಚ್ಚಿಸಿ ಆದೇಶ ಹೊರಡಿಸಿದ್ದರೂ ಸಹ ಸರ್ಕಾರ ಇದುವರೆಗೂ ಇವರಿಗೆ ಹೆಚ್ಚಳವಾದ ವೇತನ ತಲುಪದೇ ಇರಲು ಕಾರಣಗಳೇನು; ಯಾವ ಕಾರಣಕ್ಕಾಗಿ ನೀಡಲಾಗುತ್ತಿಲ್ಲ ಮತ್ತು ಸದರಿ ಕಡತವು ಯಾವ ಹಂತದಲ್ಲಿದೆ; (ಸಂಪೂರ್ಣ ವಿವರ ನೀಡುವುದು) | ಕನಿಷ್ಠ ವೇತನದ ಪರಿಷ್ಕರಣೆಯ ವಿಷಯವು ಪ್ರಸ್ತುತ ಸಚಿವ ಸಂಪುಟದ ಪರಿಶೀಲನೆಯಲ್ಲಿದೆ. |
| ಈ | ಸದರಿ ಗುತ್ತಿಗೆ ನೌಕರರಿಗೆ ಇಲಾಖೆಯು ಹೆಚ್ಚಳವಾಗಿರುವ ಬಾಕಿ ವೇತನವನ್ನು (Arrears) ಯಾವ ಕಾಲಮಿತಿಯೊಳಗೆ ಬಿಡುಗಡೆ ಮಾಡಿ, ನೌಕರರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲು ಕ್ರಮ ಕೈಗೊಳ್ಳಲಿದೆ? (ವಿವರ ಒದಗಿಸುವುದು) | ಅನ್ವಯಿಸುವುದಿಲ್ಲ. |

**ಆಇ 156 ವಾತೆಇ 2026**

(ಡಿ.ಕೆ. ಶಿವಕುಮಾರ)
ಮುಖ್ಯಮಂತ್ರಿ

# ಅನುಬಂಧ-1

<u>ಮಾನ್ಯ ವಿಧಾನ ಪರಿಷತ್ತಿನ ಸದ್ಯಸರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 502 (630)ರ ಉಪ ಪ್ರಶ್ನೆ (ಅ)ರ ಅನುಬಂಧ</u>

**ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ವಿಭಾಗವಾರು ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಆಧಾರದ ದತ್ತಾಂಶ ನಮೂದಕರುಗಳ ವಿವರಗಳು**

| ಕ್ರಮ ಸಂಖ್ಯೆ | ವಿಭಾಗಗಳ ವಿವರಗಳು | ದತ್ತಾಂಶ ನಮೂದಕರು |
|---|---|---|
| 1 | ವಾಣಿಜ್ಯ ತೆರಿಗೆಗಳ ಆಯುಕ್ತರ ಕಛೇರಿ, ಬೆಂಗಳೂರು | 91 |
| 2 | ವಾತೆಅಆ (ಜಾರಿ), ದಕ್ಷಿಣ ವಲಯ, ಬೆಂಗಳೂರು | 85 |
| 3 | ವಾ.ತೆ.ಜಂ.ಆ (ಜಾಗೃತಿ), ಬೆಂಗಳೂರು. | 38 |
| 4 | ವಾ.ತೆ.ಜಂ.ಆ (ಅತ್ಯಧಿಕ ತೆರಿಗೆ ವಿಭಾಗ), ಬೆಂಗಳೂರು. | 23 |
| 5 | ವಾ.ತೆ.ಜಂ.ಆ (ಆಡಳಿತ), ವಿ.ಸ &.ಸೇ.ತೆ. ಕಛೇರಿ-1, ಬೆಂಗಳೂರು | 105 |
| 6 | ವಾ.ತೆ.ಜಂ.ಆ (ಆಡಳಿತ), ವಿ.ಸ &.ಸೇ.ತೆ. ಕಛೇರಿ-2, ಬೆಂಗಳೂರು | 91 |
| 7 | ವಾ.ತೆ.ಜಂ.ಆ (ಆಡಳಿತ), ವಿ.ಸ &.ಸೇ.ತೆ. ಕಛೇರಿ-3, ಬೆಂಗಳೂರು | 75 |
| 8 | ವಾ.ತೆ.ಜಂ.ಆ (ಆಡಳಿತ), ವಿ.ಸ &.ಸೇ.ತೆ. ಕಛೇರಿ-4, ಬೆಂಗಳೂರು | 100 |
| 9 | ವಾ.ತೆ.ಜಂ.ಆ (ಆಡಳಿತ), ವಿ.ಸ &.ಸೇ.ತೆ. ಕಛೇರಿ-5, ಬೆಂಗಳೂರು | 123 |
| 10 | ವಾ.ತೆ.ಜಂ.ಆ (ಆಡಳಿತ), ವಿ.ಸ &.ಸೇ.ತೆ. ಕಛೇರಿ-6, ಬೆಂಗಳೂರು | 111 |
| 11 | ವಾ.ತೆ.ಜಂ.ಆ (ಆಡಳಿತ), ವಿ.ಸ &.ಸೇ.ತೆ. ಕಛೇರಿ- ಮೈಸೂರು | 117 |
| 12 | ವಾ.ತೆ.ಜಂ.ಆ (ಆಡಳಿತ), ವಿ.ಸ &.ಸೇ.ತೆ. ಕಛೇರಿ- ಮಂಗಳೂರು | 145 |
| 13 | ವಾ.ತೆ.ಜಂ.ಆ (ಆಡಳಿತ), ವಿ.ಸ &.ಸೇ.ತೆ. ಕಛೇರಿ- ಶಿವಮೊಗ್ಗ | 84 |
| 14 | ವಾ.ತೆ.ಜಂ.ಆ (ಆಡಳಿತ), ವಿ.ಸ &.ಸೇ.ತೆ. ಕಛೇರಿ- ದಾವಣಗೆರೆ | 109 |
| 15 | ವಾ.ತೆ.ಜಂ.ಆ (ಆಡಳಿತ), ವಿ.ಸ &.ಸೇ.ತೆ. ಕಛೇರಿ- ಧಾರವಾಡ | 123 |
| 16 | ವಾ.ತೆ.ಜಂ.ಆ (ಆಡಳಿತ), ವಿ.ಸ &.ಸೇ.ತೆ. ಕಛೇರಿ- ಬೆಳಗಾವಿ | 120 |
| 17 | ವಾ.ತೆ.ಜಂ.ಆ (ಆಡಳಿತ), ವಿ.ಸ &.ಸೇ.ತೆ. ಕಛೇರಿ- ಕಲಬುರಗಿ | 75 |
| | **ಒಟ್ಟು** | **1615** |

# ಅನುಬಂಧ-2

<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 502 (630)ರ ಉಪ ಪ್ರಶ್ನೆ (ಅ)ರ ಅನುಬಂಧ</u>

**ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ವಿಭಾಗವಾರು ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ಆಧಾರದ ಅಟೆಂಡರ್‌ಗಳ ವಿವರಗಳು**

| ಕ್ರಮ ಸಂಖ್ಯೆ | ವಿಭಾಗಗಳ ವಿವರಗಳು | ಅಟೆಂಡರ್‌ಗಳು |
|---|---|---|
| 1 | ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ವಾಣಿಜ್ಯ ತೆರಿಗೆಗಳ ಕಾರ್ಯಾಲಯ-1, 1 ಗಾಂಧಿನಗರ, ಬೆಂಗಳೂರು. (ಕೇಂದ್ರ ಕಛೇರಿ-96, ವಲಯ-1,2,3,4 :12 ಕ ಮೇ ಪ್ರಾ-04) ಜಿ.ಎಸ್.ಟಿ. ಟ್ರಿಬಿನಲ್-10. | 122 |
| 2 | ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಜಾರಿ), ದ.ವ-35 ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಜಾಗೃತಿ)-30 | 65 |
| 3 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆ).ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-1, ಯಶವಂತಪುರ (ವಿ.ಸ&ಸೇ.ತೆ.ಕಛೇರಿ-1: 27, ಮನವಿಗಳು-1: 02) | 29 |
| 4 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆ).ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-2, ರಾಜರಾಜೇಶ್ವರಿ ನಗರ (ವಿ.ಸ&ಸೇ.ತೆ.ಕಛೇರಿ-2: 32, ಮನವಿಗಳು-2: 02) | 34 |
| 5 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-3, ಶಾಂತಿನಗರ (ವಿ.ಸ&ಸೇ.ತೆ.ಕಛೇರಿ-3: 35, ಮನವಿಗಳು-3: 02) | 37 |
| 6 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆ),ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-4, ಕೋರಮಂಗಲ (ವಿ.ಸ&ಸೇ.ತೆ.ಕಛೇರಿ-4: 42, ಮನವಿಗಳು-4: 02) | 44 |
| 7 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆ) ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-5, ಕೋರಮಂಗಲ (ವಿ.ಸ&ಸೇ.ತೆ.ಕಛೇರಿ-5: 42, ಮನವಿಗಳು-5: 02) | 44 |
| 8 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಆ).ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-6, ಪೀಣ್ಯ (ವಿ.ಸ&ಸೇ.ತೆ.ಕಛೇರಿ-6: 39, ಮನವಿಗಳು-6: 02) | 41 |
| 9 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಮನವಿಗಳು)-7 | 2 |
| 10 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಮನವಿಗಳು)-8 | 2 |
| 11 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು(ಮನವಿಗಳು)-9 | 2 |
| 12 | ಅತ್ಯಧಿಕ ತೆರಿಗೆ ಪಾವತಿದಾರರ ಘಟಕ | 21 |
| 13 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ಶಿವಮೊಗ್ಗ(ವಿ.ಸ&ಸೇ.ತೆ.ಕಛೇರಿ: 35, ಜಾರಿ: 16, ಮನವಿಗಳು: 02) | 53 |
| 14 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ಮೈಸೂರು (ವಿ.ಸ&ಸೇ.ತೆ.ಕಛೇರಿ: 38, ಜಾರಿ: 13, ಮನವಿಗಳು: 02) | 53 |
| 15 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ಮಂಗಳೂರು (ವಿ.ಸ&ಸೇ.ತೆ.ಕಛೇರಿ: 61, ಜಾರಿ: 20, ಮನವಿಗಳು: 02) | 83 |
| 16 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ಬೆಳಗಾವಿ (ವಿ.ಸ&ಸೇ.ತೆ.ಕಛೇರಿ: 50, ಜಾರಿ: 13, ಮನವಿಗಳು: 02) | 65 |
| 17 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ದಾವಣಗೆರೆ(ವಿ.ಸ&ಸೇ.ತೆ.ಕಛೇರಿ: 31, ಜಾರಿ, ಬಳ್ಳಾರಿ: 10, ಮನವಿಗಳು: 02) | 43 |
| 18 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ಧಾರವಾಡ (ವಿ.ಸ&ಸೇ.ತೆ.ಕಛೇರಿ: 60, ಜಾರಿ, ಹುಬ್ಬಳ್ಳಿ: 17, ಮನವಿಗಳು: 02) | 79 |
| 19 | ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ, ಕಲಬುರಗಿ (ವಿ.ಸ&ಸೇ.ತೆ.ಕಛೇರಿ: 29, ಜಾರಿ: 13, ಮನವಿಗಳು: 02) | 44 |
| | **ಒಟ್ಟು** | **863** |